**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ. 1049/2016</u>**

**<u>ಸಿ.ಡಬ್ಲ್ಯೂಃ 4 ಪಿ.ಡಬ್ಲ್ಯೂಃ 3</u>**

ಸಾಕ್ಷಿದಾರನ ಹೆಸರು : ಪ್ರವೀಣ
ತಂದೆಯ ಹೆಸರು : ಭೀಮನಗೌಡ
ವಯಸ್ಸು : 35 ವರ್ಷ
ಕೆಲಸ : ವ್ಯವಸಾಯ
ವಾಸ : ಕೆ ಬೆಳಗಲ್

**<u>ಸಾಕ್ಷಿಗೆ ದಿನಾಂಕಃ14.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

1. ನನಗೆ ಚಾಸಾ 1, 5 ರಿಂದ 14 ಗೊತ್ತು. ದಿಃ 25.10.2016 ರಂದು ಬೆಳಗ್ಗೆ 09.00 ಗಂಟೆಗೆ ನಾನು ಹೊಲಕ್ಕೆ ಹೋದಾಗ ನಾನು, ಚಾಸಾ 5 ಮತ್ತು 6 ರವರು 6 ಜನ ಆರೋಪಿತರಿಗೆ ನೀರು ಕೇಳಿದೆವು. ಆಗ ಸದರಿ ಆರೋಪಿತರು ನೀರು ಕೊಡುವುದಿಲ್ಲ ಏನು ಬೇಕೊ ಮಾಡಿಕೊಳ್ಳಿ ಎಂದರು. ಆಗ ನಾವು ಚಾಸಾ 1 ರವರಿಗೆ ಫೋನ್ ಮಾಡಿದೆವು. ಆಗ ಚಾಸಾ 1 ರವರು ಅಲ್ಲಿಗೆ ಬಂದರು. ಆರೋಪಿ ನಂ 2 ಮತ್ತು 3 ರವರು ಕಲ್ಲಿನಿಂದ ನನಗೆ ಹೊಡೆದರು. ಆರೋಪಿ ನಂ 1 ರವರು ಚಾಸಾ 1 ರವರಿಗೆ ರಾಡ್ ನಿಂದ ಹೊಡೆದರು. ಚಾಸಾ 6 ರವರಿಗೆ ಆರೋಪಿ ನಂ 4 ರವರು ಕಟ್ಟಿಗೆಯಿಂದ ಹೊಡೆದರು. ಚಾಸಾ 5 ರವರಿಗೆ ಆರೋಪಿ ನಂ 2 ಮತ್ತು 3 ರವರು ಹೊಟ್ಟೆಗೆ ಒದ್ದರು. ಆರೋಪಿತರು ನಮಗೆ ಸೂಳೆಮಕ್ಕಳ ಎಂದು ಬೈದು, ಜೀವದ ಬೆದರಿಕೆ ಹಾಕಿದರು. ನಂತರ ಈ ಬಗ್ಗೆ ಚಾಸಾ 1 ದೂರು ಕೊಟ್ಟರು. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದೆನೆ. ಸಾಕ್ಷಿದರರು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಗೈರು ಹಾಜರು ಆದ ಆರೋಪಿತರ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ಆ ದಿನ ಆರೋಪಿತರು

ಹೊಡೆಯಲು ಉಪಯೋಗಿಸಿದ ಕಟ್ಟಿಗೆ, ಸಲಿಕೆ, ಕೊಡಲಿ ಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ 1 ರಿಂದ 4 ನ್ನು ನೋಡಿ ಗುರುತಿಸುತ್ತಾರೆ.

**ಈ ಹಂತದಲ್ಲಿ ಮಾನ್ಯ ಆರೋಪಿತರ ಪರ ವಕೀಲರು ಸಾಕ್ಷಿದಾರರ ಪಾಟೀ ಸವಾಲನ್ನು ಪ್ರಾಸಾ 1 ಮತ್ತು 2 ರವರ ಪಾಟೀ ಸವಾಲಿನ ನಂತರ ಮಾಡುವುದಾಗಿ ತಿಳಿಸಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**

**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 1049/2016**

**ಸಿ.ಡಬ್ಲ್ಯೂಃ5 ಪಿ.ಡಬ್ಲ್ಯೂಃ 4**

| | | |
|---|---|---|
| ಸಾಕ್ಷಿದಾರನ ಹೆಸರು | : | ಬಸವರಾಜ |
| ತಂದೆಯ ಹೆಸರು | : | ನೇರಗಲ್ಲಪ್ಪ |
| ವಯಸ್ಸು | : | 40 ವರ್ಷ |
| ಕೆಲಸ | : | ವ್ಯವಸಾಯ |
| ವಾಸ | : | ಕೆ ಬೆಳಗಲ್ |

**ಸಾಕ್ಷಿಗೆ ದಿನಾಂಕಃ14.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ನನಗೆ ಚಾಸಾ 1, 4, 6 ರಿಂದ 14 ಗೊತ್ತು. ದಿಃ 25.10.2019 ರಂದು ಬೆಳಗ್ಗೆ 09.00 ಗಂಟೆಗೆ ಕೆ ಬೆಳಗಲ್ ಗ್ರಾಮದ 59 ಕಾಲುವೆ ಬಳಿ ನೀರು ಬಿಡುವ ವಿಚಾರಕ್ಕೆ ಸಂಬಂಬಪಟ್ಟಂತೆ ಆರೋಪಿತರು ನೀಡು ಬಿಡುವುದಿಲ್ಲ ಎಂದು ಹೇಳಿದರು. ಆರೋಪಿತರು ಚಾಸಾ 1, 4 ಮತ್ತು 6 ಮತ್ತು ನನಗೆ ಸೂಳೆಮಕ್ಕಳೆ ಎಂದು ಬೈದರು. ಆಗ ಜಗಳ ಆಯಿತು. ಆರೋಪಿ ನಂ 1 ರವರು ಚಾಸಾ 1 ರವರಿಗೆ ಕಲ್ಲಿನಿಂದ ಹೊಡೆದರು. ಚಾಸಾ 6 ರವರಿಗೆ ಆರೋಪಿ ನಂ 4 ರವರು ಕಟ್ಟಿಗೆಯಿಂದ ಹೊಡೆದರು. ನನಗೆ ಆರೋಪಿ ನಂ 3 ಕಾಲಿನಿಂದ ಒದ್ದರು. ಚಾಸಾ 4 ರವರಿಗೆ ಆರೋಪಿ ನಂ 3 ರವರು ಕಟ್ಟಿಗೆಯಿಂದ ಹೊಡೆದರು. ಅಷ್ಟರಲ್ಲಿ ಹಿರಿಯರು ಬಂದು ಜಗಳ ಬಿಡಿಸಿದರು. ನನಗೆ ಹೊಟ್ಟೆ ನೋವು ಆಯಿತು. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದೆನೆ. ಸಾಕ್ಷಿದರರು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಗೈರು ಹಾಜರು ಆದ ಆರೋಪಿತರ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ಆ ದಿನ ಆರೋಪಿತರು

ಹೊಡೆಯಲು ಉಪಯೋಗಿಸಿದ ಕಟ್ಟಿಗೆ, ಸಲಿಕೆ, ಕೊಡಲಿ ಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ 1 ರಿಂದ 4 ನ್ನು ನೋಡಿ ಗುರುತಿಸುತ್ತಾರೆ.

**ಈ ಹಂತದಲ್ಲಿ ಮಾನ್ಯ ಆರೋಪಿತರ ಪರ ವಕೀಲರು ಸಾಕ್ಷಿದಾರರ ಪಾಟೀ ಸವಾಲನ್ನು ಪ್ರಾಸಾ 1 ಮತ್ತು 2 ರವರ ಪಾಟೀ ಸವಾಲಿನ ನಂತರ ಮಾಡುವುದಾಗಿ ತಿಳಿಸಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**

**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ. 1049/2016</u>**

**<u>ಸಿ.ಡಬ್ಲ್ಯೂ:6 ಪಿ.ಡಬ್ಲ್ಯೂ: 5</u>**

| | | |
|---|---|---|
| ಸಾಕ್ಷಿದಾರನ ಹೆಸರು | : | ನಾಗರಾಜಗೌಡ |
| ತಂದೆಯ ಹೆಸರು | : | ಗುಳನಗೌಡ |
| ವಯಸ್ಸು | : | 45 ವರ್ಷ |
| ಕೆಲಸ | : | ವ್ಯವಸಾಯ |
| ವಾಸ | : | ಕೆ ಬೆಳಗಲ್ |

**<u>ಸಾಕ್ಷಿಗೆ ದಿನಾಂಕಃ14.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

1. ನನಗೆ ಚಾಸಾ 1, 4, 5, 7 ರಿಂದ 14 ಗೊತ್ತು. ದಿಃ 25.10.2016 ರಂದು ಬೆಳಗ್ಗೆ 09.30 ಗಂಟೆಗೆ ಕೆ ಬೆಳಗಲ್ ಗ್ರಾಮದ 59 ಕಾಲುವೆ ಬಳಿ ನಾನು, ಚಾಸಾ 4 ಮತ್ತು 5 ಹೋಗಿದ್ದೆವು. ಆರೋಪಿತರು ಕಾಲುವೆಯಿಂದ ನೀರು ಬಿಟ್ಟುಕೊಂಡಿದ್ದರು. ನಾವು ನೀರು ಬಿಡಲು ಕೇಳಿದಾಗ ಆರೋಪಿತರು ನೀರು ಬಿಡುವುದಿಲ್ಲ ಎಂದು ಬೈದರು. ಆಗ ಚಾಸಾ 1 ರವರಿಗೆ ಫೋನ್ ಮಾಡಿ ಕರೆಯಿಸಿದೆವು. ಚಾಸಾ 1 ರವರು ನೀರಿನ ಬಗ್ಗೆ ಕೇಳಿದಾಗ ಆರೋಪಿತರು ಬಡಿಗೆ, ಕೊಡಲಿ ತೆಗೆದುಕೊಂಡು ಹೊಡೆದರು. ಚಾಸಾ 1 ರವರಿಗೆ ಆರೋಪಿ ನಂ 1 ರವರು ಕಲ್ಲಿನಿಂದ ಹೊಡೆದರು. ನನಗೆ ಆರೋಪಿ ನಂ 4 ಮತ್ತು 7 ರವರು ಕಲ್ಲಿನಿಂದ ಹೊಡೆದರು. ಚಾಸ 4 ರವರಿಗೆ ಕಲ್ಲು ಮತ್ತು ಬಡಿಗೆ ಯಿಂದ ಆರೋಪಿ ನಂ 2 ಮತ್ತು 3 ರವರು ಹೊಡೆದರು. ನಂತರ ಜನರು ಬಂದು ಎಲ್ಲರನ್ನು ಬಿಡಿಸಿಕೊಂಡರು. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದೆನೆ. ಸಾಕ್ಷಿದರರು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಗೈರು ಹಾಜರು ಆದ ಆರೋಪಿತರ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ಆ ದಿನ

ಆರೋಪಿತರು ಹೊಡೆಯಲು ಉಪಯೋಗಿಸಿದ ಕಟ್ಟಿಗೆ, ಸಲಿಕೆ, ಕೊಡಲಿ ಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ 1 ರಿಂದ 4 ನ್ನು ನೋಡಿ ಗುರುತಿಸುತ್ತಾರೆ.

**ಈ ಹಂತದಲ್ಲಿ ಮಾನ್ಯ ಆರೋಪಿತರ ಪರ ವಕೀಲರು ಸಾಕ್ಷಿದಾರರ ಪಾಟೀ ಸವಾಲನ್ನು ಪ್ರಾಸಾ 1 ಮತ್ತು 2 ರವರ ಪಾಟೀ ಸವಾಲಿನ ನಂತರ ಮಾಡುವುದಾಗಿ ತಿಳಿಸಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**